ಅಂತಂದ್ರೆ ಪ್ರಾಣ' ಎಂದಳು. 'ಅಯ್ಯೋ! ಬೇಜಾರೇನ್ಬಂತು? ತಿನ್ನಿಯಪ್ಪಾ. ನಾವು ಮನೆಗೆ ಕರೆಯೋದೇ ತಿನ್ಲಿಕ್ಕಲ್ವೇ?' ಎಂದು ಸಂತೋಷದಿಂದ ಸುಬ್ಬಿಯು ಅಡುಗೆ ಮನೆಗೆ ಹೋಗಿ ಮತ್ತೆರಡು ಕಡುಬುಗಳನ್ನು ಬಡಿಸಿದಳು ಸಾಕಷ್ಟು ತುಪ್ಪದೊಂದಿಗೆ. 'ಕಡುಬು ಸಿಹಿಯಾಗುವುದಲ್ಲವೇ? ಚಕ್ಕಲೀನೂ ಹಾಕಿಸಿಕೊಳ್ಳಿ ಎಂದು ಸುಬ್ಬಣ್ಣ ಅರುಹಿದಾಗ ಅದಕ್ಕೇ ಕಾಯುತ್ತಿದ್ದವರಂತೆ ಹೌದು ಸಾರ್! ಅದನ್ನೂ ಬಡ್ಸಿ ಬಿಡಿ' ಎಂದರು. ಸರಿ, ಎರಡೆರಡು ಚಕ್ಕುಲಿಗಳು ಅವರ ಎಲೆಗಳನ್ನಲಂಕರಿಸಿದವು. ಅಡುಗೆ ಮನೆಯಿಂದಲೇ ಸುಬ್ಬಿಯು 'ನೀವು ಊಟ ಮಾಡೋದಾದ್ರೆ ಅನ್ನನೂ ಬಡ್ಸಿ ಬಿಡ್ಲಾ? ಸಾರಂತೂ ಬೊಂಬಾಟಾಗಿದೆ. ನೀವೊಮ್ಮೆ ಊಟ ಮಾಡಿದ್ರೆ ಬಿಡಲ್ಲಾ ಎಂದು ಕೂಗಿದಾಗ ಹರಿಣಿಯು ಮ್ಯಾಡಮ್! ಊಟ ಬ್ಯಾಡ, ಸ್ವಲ್ಪ ಪಲ್ಯಗಿಲ್ಯ, ಜೊತೆಗೆ ನೀವು ಹೇಳಿದ ಆ ಬೊಂಬಾಟಾದ ಸಾರನ್ನ ಒಂದು ಬಟ್ಟಲಲ್ಲಿ ಕೊಟ್ಟು ಬಿಡಿ, ಹಾಗೇ ಸೂಪಿನ್ಹಾಗೆ ಕುಡ್ದು ಬಿಡ್ತೀವಿ' ಎಂದಳು. ಉಳಿದಿಬ್ಬರೂ ತಲೆ ಮೇಲೆತ್ತದೇ ಕಡುಬನ್ನು ಮುರಿಯುತ್ತಾ, ತುಪ್ಪದಲ್ಲಿ ಹೊರಳಿಸುತ್ತಾ ಹಾಗೇ ಆಗಲೆಂದು ತಲೆಯಲ್ಲಾಡಿಸಿದರು.

ಆರಿ ಹೋಗಿದ್ದ ಟೊಮ್ಯಾಟೊ ಸಾರನ್ನು ಬಿಸಿ ಮಾಡಿ, ಹೊಸತಾದ ಮೆಲಮೈನ್ ಬೌಲ್‌ಗಳಿಗೆ ಸುರಿದು ಸುಬ್ಬಿಯು ಅವರೆಲ್ಲರೆದುರಿಗೆ ಇಟ್ಟಳು. ಮಧ್ಯಾಹ್ನದ ಉಳಿದ ಬಾಳೆಕಾಯಿ ಮತ್ತು ಕೋಸಿನ ಪಲ್ಯಗಳನ್ನು ಒಂದೊಂದು ಸೌಟು ಬಡಿಸಿದಳು. ರುಚಿ ರುಚಿಯಾಗಿ ಬಿಸಿಯಾಗಿದ್ದ ಆ ತಿಳಿಸಾರು ತುಂಬಿದ ಬೋಗುಣಿಗಳನ್ನು ಬೊಗಸೆಗಳಲ್ಲಿ ಹಿಡಿದುಕೊಂಡು ಸೂಪಿನ ರೀತಿಯಲ್ಲಿ ಗುಟುಕರಿಸುತ್ತಾ ಸಿಹಿಯಾಗಿದ್ದ ತಮ್ಮ ಬಾಯಿಯನ್ನು ಮುಂದಿನ ಕಡುಬಿನ ಭಕ್ಷಣೆಗೆ ಅವರು ಅನುಮಾಡಿ ಕೊಳ್ಳತೊಡಗಿದ್ದು ಸುಬ್ಬಿಗೆ ಗೊತ್ತಾಗಲಿಲ್ಲ. ಸೂಪು ಅರ್ಧ ಮುಗಿದಾಗ ಮ್ಯಾಡಮ್! ತಟ್ಟೇಲಿ ಸ್ವಲ್ಪ ತುಪ್ಪ ಉಳಿದು ಬಿಟ್ಟಿದೆ, ಹಾಗೇ ತಿಂದ್ರೆ ಗಂಟಲು ಕೆರ್ತ ಶುರುವಾಗತ್ತೆ. ಇನ್ನೊಂದ್ ಸ್ವಲ್ಪ ಕಡ್ಬು ಹಾಕ್ಬಿಡಿ, ಮುಗ್ಸಿ ಬಿಡ್ತಿವಿ. ಹಿ ಹ್ಹಿ ಹ್ಹೀ.. ಎಂದು ಮತ್ತದೇ ಹರಿಣಿಯು ಅಮಾಯಕಳಾಗಿ ಅರುಹಿದಾಗ ವಾಸ್ತವಕ್ಕೆ ಬಂದ ಸುಬ್ಬಿಯು ಒಳ ಹೋಗಿ ತನ್ನ ಕಡುಬಿನ ಪಾತ್ರೆಯನ್ನು ನೋಡುತ್ತಾಳೆ ಉಳಿದದ್ದು ಹದಿನೆಂಟು ಕಡುಬುಗಳು. ಅವೆಲ್ಲವನ್ನೂ ಒಂದು ತಟ್ಟೆಯಲ್ಲಿ ಹಾಕಿಕೊಂಡು ಬಂದು ಅವರೆದುರು ನಿಂತು, ಸಂಕೋಚವಿಲ್ಲದೇ ಹೇಳಿ, ಎಷ್ಟೆಷ್ಟು ಹಾಕ್ಲೀ? ಎಂದಳು ಸುಬ್ಬಿ. ಅದಕ್ಕೇ ಕಾಯುತ್ತಿದ್ದವಳಂತೆ ಹರಿಣಿಯು ಮ್ಯಾಡಮ್! ನಾನು ಮೊದ್ಲೇ ಹೇಳಿದಂಗೆ ನಂಗೆ ಕಡ್ಬು ಅಂದ್ರೆ ಪ್ರಾಣ. ಮೂರು ಹೊತ್ತು ಹಾಕಿದ್ರೂ ನಾನು ಇಷ್ಟಪಟ್ಟು ತಿನ್ತೇನೆ. ಹಾಗಾಗಿ ನಂಗೆ ಇನ್ನೊಂದ್ ನಾಲ್ಕು ಕಡ್ಬು, ಎರಡು ಚಕ್ಕಲಿ, ಒಂದು ಮೋದಕ ಬಡ್ಸಿ ಬಿಡಿ. ಸಾಕೇಸಾಕು. ಜೊತೆಗೆ ಸೂಪರ್ರಾಗಿರೋ ಸಾರನ್ನೂ ಈ ಬೌಲ್ಗೆ ತುಂಬಿಸಿ ಬಿಡಿ. ನನ್ನಾತ್ಮ ತೃಪ್ತವಾಗುತ್ತೆ ಎಂದಳು. ಉಳಿದವರೂ ಅವಳಷ್ಟೇ ಪ್ರಮಾಣದ ಕಡುಬುಗಳನ್ನೂ, ಜೊತೆಗೆ ಬಿದ್ದ ಎರಡೆರಡು ಚಕ್ಕುಲಿಗಳನ್ನೂ ಭುಂಜಿಸಿ ಮೇಲೇಳಲಾಗದೇ ಹಾಗೆಯೇ ಐದು ನಿಮಿಷ ಗೋಡೆಗೊರಗಿ ಕುಳಿತರು. ಮೊದ ಮೊದಲು ಸುಬ್ಬ ಸುಬ್ಬಿಯರು ಈ ಮದುವೆಯಾಗದ ಕನ್ಯೆಯರೆಷ್ಟು ತಿಂದಾರು ಮಹಾ? ಈಗಿನ ಕಾಲದವ್ರಲ್ವೇ? ಫಿಗರ್ ಮೆಂಟೇನ್ ಮಾಡ್ಲಿಕ್ಕೆ ಒದ್ದಾಡ್ತಿರ್ತಾರೆ. ತಿಂದು ತಿಂದು ಜಾಸ್ತಿ ಅಂದ್ರೆ ಐದು ಕಡ್ಬು ತಿಂದಾರು ಎಂದುಕೊಂಡವರು ಆಮೇಲಾಮೇಲೆ ಹನುಮಂತನ ಬಾಲದಂತೆ ಬೆಳೆಯುತ್ತಿದ್ದ ಅವರ ಆ ಮಿನಿ ಭೋಜನವನ್ನು ಕಂಡು ಅಷ್ಟೂ ಬೆರಳನ್ನು ಮೂಗಿನ ಮೇಲಿಟ್ಟರು!

ಹತ್ತು ನಿಮಿಷ ಸುಧಾರಿಸಿಕೊಂಡ ಮೇಲೆ ನೆಲಕ್ಕೆ ಕೈಯೂರಿ ಎದ್ದು, ಭಾರವಾದ ಉದರಗಳೊಂದಿಗೆ ನಡುಬಗ್ಗಿಸಿ, ಬಚ್ಚಲಿಗೆ ಹೋಗಿ, ಹಂಡೆಯಲ್ಲಿದ್ದ ಹದವಾದ ಬಿಸಿನೀರಿನಲ್ಲಿ ತುಪ್ಪ ಮೆತ್ತಿಕೊಂಡಿದ್ದ ಕೈಗಳನ್ನು ತೊಳೆದುಕೊಂಡು ಬಂದರು ಮೂವರೂ ಕನ್ಯಾಮಣಿಗಳು! ಹಜಾರದಲ್ಲಿ ಸುಬ್ಬಣ್ಣನು ಹಾಸಿದ್ದ ಚಾಪೆಯ ಮೇಲೆ ಕುಳಿತು, ಪೇರಿಸಿಟ್ಟ ವೀಳ್ಯದೆಲೆಯನ್ನು ಸಿಹಿಯಾದ ಅಡಿಕೆಯೊಂದಿಗೆ ಮೆಲ್ಲುತ್ತಾ ಸ್ವಲ್ಪ ಹಗುರವಾದ ಮೇಲೆ, ಎಲ್ಲಿಲ್ಲದ ನಾಚಿಕೆಯೊಂದಿಗೆ ಮ್ಯಾಡಮ್! ನಮ್ಮನ್ನ ಅನ್ಯಥಾ ಭಾವಿಸಬೇಡಿ. ನಾವು ತಿನ್ನಲಿಕ್ಕೆ ನಾಚುವುದಿಲ್ಲ. ಅದರಲ್ಲೂ ಪರಿಚಯಸ್ಥರ ಬಳಿ ಏನು ನಾಚಿಕೆ? ಅಲ್ವಾ? ನಿಮ್ಮ ಕೈರುಚಿ ಮಾತ್ರ ನಿಜವಾಗಿಯೂ ಅದ್ಭುತವಾಗಿತ್ತು. ಇವತ್ತಿನ ಸಾಯಂಕಾಲದ ಸ್ನ್ಯಾಕ್ಸ್ ಚಿಂತೆಯಿಲ್ಲ. ಇನ್ನು ರಾತ್ರೆಯ ತನ್ಕ ಹ್ಯಾಗೋ ಕಾಲ ಕಳೆದು, ಹಾಸ್ಟೇಲಿನ ಊಟ ಮಾಡಿ ಮಕ್ಕಂಬಿಟ್ರೆ ಮುಗೀತು. ನಾಳೆ ಬೆಳಿಗ್ಗೆವರ್ಗೂ ತೊಂದ್ರೆ ಇಲ್ಲ. ಬೈ ದಿ ಬೈ, ಗಣಪತಿಗೆ ಇನ್ನೊಮ್ಮೆ ಯಾವ್ದಕ್ಕೂ ನಮಸ್ಕಾರ ಮಾಡಿಬಿಡಣ, ಯಾಕಂದ್ರೆ ನಾವು ನಿಜವಾಗಿ ಬಂದಿದ್ದು ಅವ್ನನ್ನ ನೋಡೋಕಲ್ಲಾ, ಹೊಟ್ಟೆ ಬಿರಿ ತಿನ್ನೋಕೆ ಅಂತಾ ಈಗಾಗ್ಲೇ ಅವ್ನಿಗೂ ಗೊತ್ತಾಗಿರತ್ತೆ. ಮತ್ತೆ ಎಲ್ಲಾದ್ರೂ ಶಾಪ ಕೊಟ್ಟು ಬಿಟ್ರೆ ಮುಂದಿನ ವರ್ಷ ನಮ್ಗೆಲ್ಲಾ ಹಾಸ್ಟೆಲ್ ಊಟಾನೇ ಗತಿಯಾಗ್ಬಹುದು ಎಂದಳು ಭಾಮೆ. ಮ್ಯಾಡಮ್, ನಿಮ್ಗೆ ರಾತ್ರೆಗೆ ಕಡಿಮೆ ಕಡುಬು ಉಳಿದಿದೆ ಅಂತ ಗೊತ್ತು. ಒಂದ್ವೇಳೆ ಅವೇ ನಾಳೆಗೇನಾದ್ರೂ ಉಳಿದ್ರೆ ಪ್ಲೀಸ್, ಕಾಲೇಜಿಗೆ ತೊಗೊಂಡು ಬನ್ನಿ. ಖುಷಿಯಿಂದ ತಿನ್ತೀವಿ. ಇಲ್ಲಾಂದ್ರೆ ಮುಂದೆ ಯಾವಾಗಾದ್ರೂ ಇದನ್ನ ಮಾಡ್ದಾಗ ನಮ್ಮ ಸಲ್ವಾಗಿ ಒಂದು ಲೋಟ ಜಾಸ್ತಿ ಅಕ್ಕಿ ನೆನ್ಸಿ ರುಬ್ಬಿಬಿಡಿ. ಆಯ್ತಾ? ಎಂದ ಹರಿಣಿಯ ಮಾತಿಗೆ ಬೆಚ್ಚಿಬಿದ್ದ ಸುಬ್ಬಣ್ಣನು ಯಲಾ ಇವ್ರಾ? ನೋಡೋಕೆ ಇಷ್ಟುದ್ದ ಇಲ್ಲಾ, ನನ್ನನ್ನೂ ಮೀರಿಸೋ ಹಂಗೆ ತಿಂದು ಇನ್ನು ರಾತ್ರೆ ಊಟ ಬೇರೆ ಮಾಡ್ತಿವಿ ಅಂತಿದಾರಲ್ಲಾ? ಆಗಬಹುದು ಇವರು. ಸಾಮಾನ್ಯರಲ್ಲಪ್ಪಾ! ನನ್ನನ್ನೂ ಮೀರಿಸಿಬಿಟ್ರಲ್ಲಾ? ಸದ್ಯ, ನನ್ನ ಹಾಗೆ ತಿನ್ನೋರು ಈ ಪ್ರಪಂಚದಲ್ಲಿ ಇನ್ನೂ ಇದ್ದಾರೆ ಅಂತಾಯ್ತು. ಇನ್ನು ಪರ್ವಾಗಿಲ್ಲ! ಸುಬ್ಬಿ ಇನ್ಮೇಲೆ ಈ ವಿಷ್ಯದಲ್ಲಿ ನನ್ನನ್ನ ಹಂಗಿಸೋ ಮಾತೇ ಇಲ್ಲಾ! ಎಂದುಕೊಂಡು ಸುಬ್ಬಿಯ ಕಡೆಗೆ ನೋಡಿದ ಮಿಂಚಿದ ಕಣ್ಣುಗಳೊಂದಿಗೆ! ಅದೇ ಭಾವವನ್ನು ಸ್ಫುರಿಸುತ್ತಿದ್ದ ನಯನಗಳೊಂದಿಗೆ ಅತಿಥಿಗಳ ತೃಪ್ತ ಮನದ ಆಶೀರ್ವಾದದೊಂದಿಗೆ ಮಿಂದೆದ್ದ ಸುಬ್ಬಿಯೂ ಗಂಡನ ನಗುವನ್ನು ಅನುಸರಿಸಿದಳು.

# ಜೋಗುಳದಲಿ ಅವನು

★ ಜಮುನಾ ರಾಣಿ ಎಚ್.ಎಸ್.

ಬದುಕು ನನಗೆ ನೂರೊಂದು ತಿರುವುಗಳ ನೀಡಿತ್ತು. ಕನಸುಗಳ ಕಟ್ಟಿಕೊಟ್ಟಿತ್ತು. ಪ್ರೀತಿ ತುಂಬಿ ಪ್ರತಿ ಹೆಜ್ಜೆಯಲೂ ನೆಮ್ಮದಿಯ ಹೆಣೆಸಿತ್ತು. ಕಂಡ ಕನಸುಗಳೆಲ್ಲಾ ಕೈ ಹಿಡಿದಿತ್ತು. ಆದರೆ ಅದ್ಯಾಕೆ ಬೇಸರಿಸಿತೋ ಕಾಣೆ. ಕೊಟ್ಟಿದ್ದನೆಲ್ಲಾ ಒಮ್ಮೆಲೇ ಕಸಿದುಕೊಂಡು ಬಿಟ್ಟಿತು ಅಥವಾ ನಾನೇ ನನ್ನ ಕೈಯ್ಯಾರೆ ಎಲ್ಲವನೂ ದೂಡಿ ಈ ಹಾದಿಯ ಹಿಡಿದು ಬಿಟ್ಟೆ. ಇದು ಬಿಟ್ಟರೆ ನನಗಿನ್ಯಾವ ಆಯ್ಕೆ ಇತ್ತು ಅಲ್ಲವೇ ?

ಜೀವನ್ ನನ್ನ ಬದುಕಿನ ಉಸಿರಾಗಿದ್ದ. ಪ್ರತಿದಿನದ ಬೆಳಕಾಗಿದ್ದ. ಕಾಲೇಜಿನ ಆ ದಿನಗಳಲ್ಲಿ ನಾವು ದಿನದ ಬಹುದೇಕ ಸಮಯವ ಒಟ್ಟಿಗೆ ಕಳೆಯುತ್ತಿದ್ದೆವು, ಒಟ್ಟಿಗೆ ಕಾಲೇಜಿಗೆ ಹೋಗುತ್ತಿದ್ದೆವು, ಒಂದೇ ಬೆಂಚಿನಲ್ಲಿ ಕೂರುತ್ತಿದ್ದೆವು, ಮನೆ ಪಾಠಕ್ಕೆ ಹೋಗುತ್ತಲಿದ್ದೆವು, ಒಟ್ಟಿಗೆ ಪರೀಕ್ಷೆಗೆ ತಯಾರಿ ನಡೆಸುತ್ತಿದ್ದೆವು. ದಿನಗಳೆದಂತೆ ಸ್ನೇಹ ಗಾಢವಾಗತೊಡಗಿತ್ತು.

ಕೆಲಸಕ್ಕಾಗಿ ಬೆಂಗಳೂರಿಗೆ ಬಂದ ನಾವು ನಾಲ್ಕು ವರ್ಷ ಒಟ್ಟಿಗೆ ಜೀವನ ನಡೆಸಿದೆವು. ಅವನ ಸನಿಹದಲಿ ನಾನು ಪ್ರತಿದಿನ ಅರಳುತ್ತಲಿದ್ದೆ. ಜೀವನ್ ಕೂಡ ನನ್ನನ್ನು ಅಷ್ಟೇ ಇಷ್ಟಪಟ್ಟಿದ್ದ. ಆ ಸುಂದರ ಸುಮಧುರ ದಿನಗಳು ನಿಜಕ್ಕೂ ನನ್ನ ಬದುಕಿನಲಿ ಮರೆಯಲಾಗದ, ಮತ್ತೆ ಮತ್ತೆ ಕನಸಾಗಿ ನಾಳೆಗಳಿಗೆ ಕೈ ಹಿಡಿಯುವ ದಿನಗಳು. ಬಂಗಾರದ ಅಕ್ಷರಗಳಲಿ ನನ್ನ ಹೃದಯದಲ್ಲಿ ಬರೆದಿಡಲಾಗಿರುವ ಅಪೂರ್ವ ಕ್ಷಣಗಳು. ಅಲ್ಲಿ ಯಾವುದೇ ನೋವು, ಬೇಸರ, ಹತಾಶೆಯ ಸುಳಿವೂ ಇರಲಿಲ್ಲ.

ಒಂದೇ ರೀತಿಯ ಕನಸುಗಳ ಕಂಡಿದ್ದೆವು. ಏರಬೇಕಿರುವ ಎತ್ತರದ ನೀಲಿನಕ್ಷೆಯ ಮನಸ್ಸಿನಲ್ಲಿಯೇ ರೂಪಿಸಿದ್ದೆವು. ಕಷ್ಟಪಟ್ಟು ಇಬ್ಬರೂ ದುಡಿಯುತ್ತಿದ್ದೆವು. ಕೂಡಿಟ್ಟ ಹಣವನು ಮನೆಯವರಿಗೆ ಕಳುಹಿಸಿ ಸಂತಸ ಪಡುತ್ತಿದ್ದೆವು. ಕಾಲ ಉರುಳಿದಂತೆ ಅದ್ಯಾವಾಗ ಅವನಿಗೆ ನನ್ನನ್ನು ನಾನು ಸಮರ್ಪಿಸಿಕೊಂಡೆ ಎನ್ನುವುದೇ ತಿಳಿಯಲಿಲ್ಲ. ಅವನೂ ನನ್ನನ್ನು ಅಷ್ಟೇ ಪ್ರೀತಿಯಿಂದ ಕಾಣುತ್ತಿದ್ದ ಕೂಡ.

ಒಟ್ಟಿಗೆ ಊರಿಗೆ ಹೋಗುತ್ತಿದ್ದೆವು. ಅವನ ತಂದೆ ತಾಯಿ ಕೂಡ ನನ್ನನ್ನು ಅಕ್ಕರೆಯಿಂದ ಕಾಣುತ್ತಲಿದ್ದರು. ನಾಳೆಗಳ ಕನಸುಗಳು ನಮ್ಮಿಬ್ಬರಲ್ಲಿಯೂ ಚಿಗುರಿ ಆಗಲೇ ಗಿಡವಾಗತೊಡಗಿದ್ದವು. ಆಗಲೇ ಜೀವನ್ ನ ಮನೆಯಲ್ಲಿ ಮದುವೆಗಾಗಿ ಹುಡುಗಿಯ ಹುಡುಕಾಟ ಸಾಗಿತ್ತು. ಒಂದಲ್ಲಾ ಒಂದು ಕಾರಣಗಳಿಗೆ ಅವನು ಮದುವೆಯ ಮುಂದೂಡುತ್ತಲೇ ಬಂದ. ಅದು ನನಗಾಗಿ